ಸರ್ವೀಸ್ ರಿಪಿಸ್ಸರ್ ವಗೈರೆ ತರಿಸುವುದಕ್ಕೆ ತಡವಾಗಿರುತ್ತದೆ. ಎಲ್ಲ ಮಾಹಿತಿಗಳನ್ನು ತರಿಸಿಕೊಂಡು ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕೆಂದು ತಿಳಿಸಿರುತ್ತೇನೆ ಒಂದು ತಿಂಗಳೊಳಗೆ ಪ್ರಮೋಷನ್ ಗಳನ್ನು ಕೊಡುವುದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳುತ್ತೇವೆ.

ಶ್ರೀ ಎಸ್. ಎಂ. ಶಿರಾಳಿ ಚುದ್ರಶೇಖರ್.—ಸ್ವಾಮಿ ಮುಂಬಡ್ತಿ ಕೊಡತಕ್ಕಂಥಾದ್ದರಲ್ಲಿ ಇಲಾಖೆಯೊಳಗೆ ಪೆಂಡಿಂಗ್ ಇದ್ದು ಬಹಳ ಕಾಲವಾಗಿದೆಯೆಂಬುದು ತಮಗೆ ಗೊತ್ತಿದೆಯೇ ಈ ತುರ್ತು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಎಷ್ಟು ದಿವಸದೊಳಗೆ ಮುಂಬಡ್ತಿ ಕೊಡುತ್ತೀರಿ ?

ಶ್ರೀ ಎನ್ . ಚಿಕ್ಕೇಗೌಡ.—ಆದಷ್ಟು ಜಾಗ್ರತೆ ಮಾಡುತ್ತೇನೆಂದು ಹೇಳಿದ್ದೇನೆ. ಆದಷ್ಟು ಜಾಗ್ರತೆ ಎಂದರೆ ಒಂದು ತಿಂಗಳಿನೊಳಗೆ ಮಾನ್ಯ ಸದಸ್ಯರು ಕೇಳಿದ ವಿಚಾರವನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಿ ಮುಂಬಡ್ತಿ ಕೊಡುತ್ತೇವೆ.

Houses constructed by the Karnataka Housing Board at Sirsi.

465. SRI M. S KRISHNAN (Malleswaram).—Will the Minister for Finance and Housing be pleased to state :—

(*a*) the number of houses constructed by the Karnataka Housing Board in Sirsi ;

(*b*) what is the expenditure incurred for the construction of these houses ;

(*c*) whether all these houses have been occupied or not ;

(*d*) if not, the reasons for the same ?

SRI M. Y. GHORPADE (Minister for Finance and Housing).—

(*a*)	Low Income Group Houses	...	100 Nos.
	Middle Income Group Houses	...	9 Nos.
(*b*)	Low Income Group Houses	...	Rs 18.78 Lakhs.
	Middle Income Group Houses	...	Rs. 3.77 Lakhs.

(*c*) Not occupied

(*d*) Leakages have occurred due to defective laying of weather proof course. The defects are being rectified and the houses will be allotted immediately thereafter.

ಶ್ರೀ ಎಂ. ಎಸ್. ಕೃಷ್ಣನ .— (ಸ)ಗೆ ಉತ್ತರ ಕೊಡುತ್ತಾ ಈ ಮನೆಗಳನ್ನು ಇನ್ನೂ ಯಾವುದನ್ನೂ ಆಕ್ಯುಪೈ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ ಈ ಮನೆಗಳನ್ನು ಕಟ್ಟಿದ್ದು ಯಾವಾಗ ? ಎಷ್ಟು ದಿವಸದಿಂದ ಆಕ್ಯುಪೈ ಮಾಡಿಕೊಂಡಿಲ್ಲ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಂ. ವೈ ಘೋರ್ಪಡೆ —ಲೋ ಇನ್‌ಕಮ್ ಗ್ರೂಪ್ ಮನೆಗಳನ್ನು ೧೯೭೨ರಲ್ಲಿ ಕಟ್ಟಿದ್ದು ಮತ್ತೆ ೯ ಮಿಡಲ್ ಇನ್‌ಕಮ್ ಗ್ರೂಪ್ ಮನೆಗಳನ್ನು ೧೯೭೫ರಲ್ಲಿ ಕಟ್ಟಿದ್ದು ಇವೆ ಈ ಮನೆಗಳನ್ನು ಸರಿಯಾಗಿ ಕಟ್ಟಿಲ್ಲ. ಏಕೆಕ್ಕೆಂದರೆ ರೂಫ್ ಲೀಕ್ ಆಗುತ್ತಿತ್ತು. ಆದುದರಿಂದ ಇದನ್ನು ಆಕ್ಯುಪೈ ಮಾಡಲಿಲ್ಲ. ಆಮೇಲೆ ಮನೆಗಳು ಎಲ್ಲಿಲ್ಲಿ ಆಕ್ಯುಪೈ ಆಗಿಲ್ಲ ಅಂತಹವುಗಳನ್ನು ಪಿಡಬ್ಲ್ಯೂಡಿ ಇಲಾಖೆಗೆ ವಹಿಸಿಕೊಡಬೇಕೆಂದು ಜಿ ಓ. ಪ್ರಕಾರ ಅಕ್ಟೋಬರ್ ೧೯೭೫ರಲ್ಲಿ ಅವರಿಗೆ ಹ್ಯಾಂಡ್ ಓವರ್ ಮಾಡಿದೆವು. ಈಗ ಕಂಟ್ರಾಕ್ಟರ್ ರೆಕ್ಟಿಫಿಕೇಷನ್ ಮಾಡಬೇಕೆಂದು ಹೇಳಿದೆವು. ಕಂಟ್ರಾಕ್ಟರ ರೆಕ್ಟಿಫಿಕೇಷನ್ ಸರಿಯಾಗಿ ಮಾಡಲಿಲ್ಲ ; ಆದುದರಿಂದ ನಾವೇ ಅದನ್ನು ರೆಕ್ಟಿಫೈ ಮಾಡಿ ಬಿಲ್ಸ್ ಕೊಡುವಾಗ ಅದನ್ನು ಮುರಿದು

ಕೊಳ್ಳಬೇಕೆಂದು ಸರ್ಕಾರ ಒಂದು ತೀರ್ಮಾನಕ್ಕೆ ಬಂತ್ತು. ಆನಂತರ ಆ ಕಂಟ್ರಾಕ್ಟರ್ ಅದರ ಮೇಲೆ ಕೋರ್ಟ್‌ನಲ್ಲಿ ಒಂದು ಸ್ಯೂಟ್ ಫೈಲ್ ಮಾಡಿ ಮುನ್ಸಿಫ್ ಕೋರ್ಟ್ ಸಿಟ್ಟಿಯಲ್ಲಿ ೧೬ನೇ ಫೆಬ್ರುವರಿ ೧೯೭೬ರಲ್ಲಿ ಆಡ್ ಇಂಟರಿಮ್ ಇಂಜೆಕ್ಷನ್ ಆರ್ಡರ್ ಸ್ಯೂಟ್ ಫೈಲ್ ಮಾಡಿದ್ದಾರೆ. ಅದರ ಹಿಯರಿಂಗ್ ೧೦ನೇ ತಾರೀಖು ಏಪ್ರಿಲ್‌ನಲ್ಲಿ ಇದ್ದದ್ದು ಮತ್ತೆ ೨೯ನೇ ತಾರೀಖು ಮೇ ಹಿಯರಿಂಗ್ ಇದೆ ಅಲ್ಲಿಯವರೆಗೆ ಕಾರ್ಯಬೇಕೋ. ಬೇಡವೊ! ಲೀಗಲ್ ಒಪೀನಿಯನ್ ತರಿಸಿದೆ. ಆಫ್ಲಿ ಎಷ್ಟರಮಟ್ಟಿಗೆ ಡಿಫೆಕ್ಟಿವ್ ಕಂಸ್ಟ್ರಕ್ಷನ್ ಇದೆಯೋ ಅಷ್ಟರಮಟ್ಟಿಗೆ ಬಿಲ್‌ನಲ್ಲಿ ಡಿಡಕ್ಟ್ ಮಾಡಿ ಮತ್ತೆ ರಿಪೇರಿ ಮಾಡಿ ಆದಷ್ಟು ಬೇಗ ಆಕ್ಯುಪೈ ಮಾಡಬೇಕಾದೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇಂತಹ ಮನೆಗಳ ಬಗ್ಗೆ ನಮಗೆ ಬಹಳ ಅಸಮಾಧಾನ ಇದೆ ಹಿಂದೆ ಹೌಸಿಂಗ್‌ಬೋರ್ಡ್‌ನವರು ಈ ಎಲ್.ಐ.ಜಿ ಮನೆಗಳನ್ನು ಸಾಕಾದಷ್ಟು ದಕ್ಷತೆಯಿಂದ ಜಾಗಗಳನ್ನು ಆರಿಸಿಕೊಂಡು ಕಟ್ಟಲಿಲ್ಲ. ಅದಕ್ಕೋಸ್ಕರ ಕಿಳ್ ಮನೆಗಳು ಎಲ್ಲಿ ಆವರು ಕಟ್ಟಿರತಕ್ಕ ಮನೆಗಳು ಆಕ್ಯುಪೈ ಆಗಲಿಲ್ಲ ಅಂತಹವುಗಳನ್ನು ಪಿಡಬ್ಲ್ಯೂಡಿಗೆ ಕೊಡುವ ಪ್ರಸಂಗ ಬಂದಿದೆ. ಅದರ ಪ್ರಕಾರ ಇವತ್ತು ಮಾಡಿದ್ದೇವೆ. ಸಿರ್ಸಿಯಲ್ಲಿ ೧೦೦ ಎಲ್.ಐ.ಜಿ ಮನೆಗಳನ್ನು ಕಟ್ಟಿದ್ದಾರೆ ಮತ್ತು ೯ ಎಂ.ಐ.ಜಿ. ಮನೆಗಳನ್ನು ಕಟ್ಟಿದ್ದಾರೆ ಯಾವ ಯಾವ ಊರಿನಲ್ಲಿ ಆಕ್ಯುಪೈ ಆಗಿಲ್ಲ ಆದರ ಪಟ್ಟಿ ನನ್ನ ಕಡೆ ಇದೆ ಕಟ್ಟುವಾಗ ಯಾವುದೋ ಪ್ರಭಾವಕ್ಕೆ ಒಳಗಾಗಿ ಕಟ್ಟಿರಬೇಕು. ಆದರೆ ಅವಶ್ಯಕತೆಯನ್ನು ನೋಡಿಕಟ್ಟಿಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಬೇಕಾಗುತ್ತದೆ ಮತ್ತೆ ಕೆಲವು ಕಡೆ ಕಟ್ಟಿದ್ದರೂ ಕೂಡ ಕಂಟ್ರಾಕ್ಟರ್ ಸರಿಯಾಗಿ ಕಟ್ಟಿಲ್ಲ. ಸ್ಯಾನಿಟೇಷನ್ ಫಿಟಿಂಗ್ಸ್, ಎಂದು ಯಾವುದೋ ಒಂದು ಕಾರಣವನ್ನು ಹೇಳುತ್ತಾರೆ ಇಲ್ಲಿ ಕೆಂಟ್ರಾಕ್ಟರ್‌ನ ಅಧಿಕ್ಷತೆಯನ್ನು ನೋಡಬಹುದು ಇವನ್ನೆಲ್ಲಾ ನಾವು ಪರಿಪಡಿಸಬೇಕಾಗಿದೆ ಈ ಉದ್ದೇಶದಿಂದ ಎಲ್ಲೆಲ್ಲಿ ಆಕ್ಯುಪೈ ಆಗಿಲ್ಲ ಎಂದು ಪಟ್ಟಿ ಮಾಡಿ ಪಿಡಬ್ಲ್ಯೂಡಿ. ಇಲಾಖೆಗೆ ಕೊಟ್ಟಿದ್ದೇವೆ. ಇದನ್ನು ತಕ್ಷಣ ರಿಪೇರಿ ಮಾಡಿ ಇದನ್ನು ಯಾವರೀತಿಯಿಂದ ಉಪಯೋಗಿಸಬೇಕು ಎಂಬುದರ ಬಗೆ ಪಿಡಬ್ಲ್ಯೂಡಿ ಇಲಾಖೆಯವರು ಸಾಕಷ್ಟು ಗಮನಕೊಟ್ಟು ಕ್ರಮ ಕೈಕೊಳ್ಳುತ್ತಾರೆಂದೂ ನಾನು ನಂಬಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—೧೯೭೦ರಲ್ಲಿ ೧೦೦ ಮನೆ ಮತ್ತು ೧೯೭೨ರಲ್ಲಿ ೯ ಮನೆಯನ್ನು ಕಟ್ಟಿದಾರೆ. ಇದು ಲೀಕೇಜ್ ಆಗಿತ್ತು ಎಂದು ಸರ್ಕಾರಕ್ಕೆ ಯಾವಾಗ ತಿಳಿಯಿತು? ಅದು ಲೀಕೇಜ್ ಆದತಕ್ಷಣ ಆವತ್ತಿನ ದಿವಸ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಯಿತು? ಇದರ ಬಗ್ಗೆ ಯಾರು ಯಾರು ಜವಾಬ್ದಾರರು ಇದ್ದಾರೆ ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

SRI M. Y. GHORPADE —These buildings under low income group as I said were completed in 1969. The leakage in roof wa observed in most of the low income buildings in 1970. The contractor was told to rectify it According to the report before me, the contractor also tried to rectify it. The idea was to make the r of water-proof by using tar material but the contractor went on representing that his bill should be settled The department kept on saying that it cannot be settled unless the buildings are satisfactorily repaired. The contractor failed to satisfactorily repair them and then the Government passed this order. Then the Chief Engineer, Karnataka Housing Board has taken it up again on 3-2-1976 under conditions of contract to get the rectification. The point is after hearing his argument we could not go on arguing. So, we have taken a decision to repair them ourselves. The contractor again represented saying that his Bill should be settled. Government said: we will not interfere and we will repair and deduct from the bills of the contractor. The contractor has filed a suit on 16-2-1976 as I have already stated. The hearing was postponed from 10th to 29th. We are getting legal opinion whether we should go ahead or whether we should wait and see what happens.

ಶ್ರೀ ಎಂ ಎಸ್. ಕೃಷ್ಣನ್.—ತಾವು ಇವತ್ತಿನ ದಿವಸ ಕಂಟ್ರಾಕ್ಟರ್‌ಗೆ ಮಾಡಿಕೊಡಿ ಎಂದು ಕೇಳುತ್ತೀರಿ. ಕಂಟ್ರಾಕ್ಟರ್ ಬಿಲ್ ಕೊಡಲಿಲ್ಲ ಎಂದು ಹೇಳುತ್ತಾನೆ. ಹೀಗೆ ೬–೭ ವರ್ಷ ತಳ್ಳಿಕೊಂಡು ಹೋಗಿದೆಯೆಂದು ನಾನು ಹೇಳುತ್ತೇನೆ. ನಾನು ಕೇಳುವುದು ಇಷ್ಟೆ. ಯಾವಾಗ ಕಂಟ್ರಾಕ್ಟರ್ ಸಮಂಜಸವಾದ ತೀರ್ಮಾನವನ್ನು ಮಾಡಲಿಲ್ಲವೋ ಆಗಲೇ ತಕ್ಷಣ ಸರಿಯಾದ ವ್ಯವಸ್ಥೆಯನ್ನು ಏತಕ್ಕೆ ಮಾಡಲಿಲ್ಲ? ಇದು ಅವರ ಬೇಜವಾಬ್ದಾರಿಯನ್ನು ತೋರಿಸುವುದಿಲ್ಲವೇ ? ಅಂತಹವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಕಂಟ್ರಾಕ್ಟರ್‌ಗೆ ರಿಪೇರಿ ಮಾಡುವುದಕ್ಕೆ ಹೇಳಿದ್ದೇವೆ. ಕಂಟ್ರಾಕ್ಟರ್ ರಿಪೇರಿ ಮಾಡುವುದಕ್ಕೆ ಒಪ್ಪಿದಮೇಲೆ ಅವಕಾಶವನ್ನು ಕೊಡಬೇಕೇ ಬೇಡವೇ !

SRI KAGODU THIMMAPPA —What was the Supervisor doing ?

SRI M. Y. GHORPADE.—The expenditure up to now has been of the order of Rs. 18.78 lakhs on L.I.C buildings and Rs. 3.77 lakhs on Meddle Income Group. It is not as if no money was received. Only the balance amount which has to be given to him we are going to give.

Seniority List of D.I.G.P. and other Police Officers/Officials

481. SRI M. B. RAMASWAMY (Anekal) — Will the Chief Minister be placed to state:—

(*a*) whether the seniority list of Police Head Constables, Constables, in the State has been prepared ;

(*b*) whether seniority list of Sub-Inspectors, Circle Inspectors, Deputy Superintendents of Police, Superintendents of Police and Deputy Inspectors General of Police has been prepared ;

(*c*) the number of officers and officials who have gone to courts for overlooking their seniority ?

SRI D. DEVARAJ URS (Chief Minister).—

(*a*) Yes.

(*b*) Yes.

(*c*) Sixteen.

ಶ್ರೀ ಎಂ. ಬಿ. ರಾಮಸ್ವಾಮಿ.— ಸ್ವಾಮಿ, (ಸಿ)ಗೆ ಉತ್ತರವಾಗಿ ೧೬ ಜನ ಕೋರ್ಟ್‌ಗೆ ಹೋಗಿದ್ದಾರೆಂದು ತಿಳಿಸಿದ್ದೀರಿ. ಅವರು ಕೋರ್ಟ್‌ಗೆ ಹೋಗುವುದಕ್ಕೆ ಕಾರಣ ಈ ಪೋಲೀಸ್ ಇಲಾಖೆಯಲ್ಲಿ ಇರತಕ್ಕಂಥ, ದೊಡ್ಡ ಹುದ್ದೆಯಲ್ಲಿರತಕ್ಕಂಥ ಅಧಿಕಾರಿಗಳು ಸರಿಯಾದ ಪಟ್ಟಿಯನ್ನು ಮಾಡಲಿಲ್ಲವೆಂದೂ ನಾನು ಮಾಡಲೇ ?

† ಶ್ರೀ ಡಿ. ದೇವರಾಜ ಅರಸ್.—ಕೋರ್ಟ್‌ಗೆ ಹೋಗಿರುವವರು ಆ ಒಂದು ಭಾವನೆಯಿಂದ ಹೋಗಿದ್ದಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ. ಎಷ್ಟು ಜನ ಅಫಿಷಿಯಲ್ಸ್ ರಿಟ್ ಹೋಗಿದ್ದಾರೆ ? ಮತ್ತು ಎಷ್ಟು ಜನ ಆಫೀಸರ್ಸ್ ರಿಟ್ ಹೋಗಿದ್ದಾರೆ? ಅವರ ಹೆಸರುಗಳ ವಿವರವನ್ನು ತಿಳಿಸುತ್ತೀರಾ ?